International Journal of Kannada Research 2022; 8(2): 75-78




International Journal of Kannada Research
www.kannadajournal.com

ISSN: 2454–5813
IJKR 2022; 8(2): 75-78
© 2022 IJKR
www.kannadajournal.com
Received: 04-02-2022
Accepted: 08-03-2022

**ಡಾ. ಚನ್ನವೀರಯ್ಯ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಆಚಾರ್ಯ ಪದವಿ ಕಾಲೇಜು, ಬೆಂಗಳೂರು, ಕರ್ನಾಟಕ, ಭಾರತ

Corresponding Author:
**ಡಾ. ಚನ್ನವೀರಯ್ಯ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಆಚಾರ್ಯ ಪದವಿ ಕಾಲೇಜು, ಬೆಂಗಳೂರು, ಕರ್ನಾಟಕ, ಭಾರತ

# ಪಂಪನ ನಾಡಪ್ರೇಮ; ಪರಿಸರ ಪ್ರೇಮಗಳ ವಿವೇಚನೆ

**ಡಾ. ಚನ್ನವೀರಯ್ಯ**

## ಪರಿಚಯ

(ಪಂಪ ಭಾರತದ ಕೆಲವು ಪದ್ಯಗಳನ್ನು ಅನುಲಕ್ಷಿಸಿ ಲೇಖನ ಸಿದ್ಧಪಡಿಸಲಾಗಿದೆ) ಪಂಪ ಕನ್ನಡದ ಆದಿಕವಿ. ಆದಿಕವಿ ಎಂದು ಕರೆಯಲು ಕಾರಣ ಮುಂದಿನ ಕವಿಗಳಿಗೆ ಮಾರ್ಗದರ್ಶಕನಾದನು. “ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ” ಎಂದು ಹದಿನಾಲ್ಕನೆ ಶತಮಾನದಲ್ಲಿದ್ದ ನಾಗರಾಜ ಕವಿ ಹೇಳಿರುವುದು ಆನೇಕ ದೃಷ್ಟಿಕೋನಗಳಿಂದ ವಿವೇಚಿಸಿದರೂ ಇಂದಿಗೂ ನಿಜ. ಯಾವ ಕಾಲಘಟ್ಟದ ಹಿನ್ನಲೆಯ ವಿಮರ್ಶಾತ್ಮಕ ಅಳತೆಗೋಲಿನಿಂದ ಅಳೆದರು ಪಂಪನು ಶ್ರೇಷ್ಟ ಕವಿ ಎನಿಸಿಕೊಳ್ಳುತ್ತಾನೆ. ಪಂಪ ಎಂದಿಗೂ ಇಂದಿಗೂ ಆದಿಕವಿ, ಅಗ್ರಕವಿ 10ನೇ ಶತಮಾನ ಈತನ ಕಾಲ. ಈತನ ಕೃತಿಗಳು ಎರಡು ‘ಆದಿಪುರಾಣ’ ಮತ್ತು ‘ಪಂಪಭಾರತ’ (ವಿಕ್ರಮಾರ್ಜುನ ವಿಜಯ) ಎಂಬ ಹಳಗನ್ನಡ ಕೃತಿಗಳು. ಆದಿಪುರಾಣ ಆಗಮಿಕ ಕಾವ್ಯವಾದರೆ, ವಿಕ್ರಮಾರ್ಜುನ ವಿಜಯ ಲೌಕಿಕ ಕಾವ್ಯ.“ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ” ಜನ್ಮ ಕೊಟ್ಟ ತಾಯಿಗಿಂತಲೂ ದೊಡ್ಡದು ಗೌರವಾಸ್ವದವಾದುದು ಜನ್ಮಭೂಮಿ. ಪ್ರಕೃತಿದತ್ತವಾಗಿ ಸೌಂದರ್ಯದ ಗಣಿಯಾಗಿ ಕರ್ನಾಟಕ ಹೆಸರುವಾಸಿಯಾಗಿದೆ. ಪ್ರಸಿದ್ಧ ರಾಜಮನೆತನಗಳು, ಸಂತರು, ಶರಣರು, ಸಮಾಜ ಸುಧಾರಕರು, ಸಾಹಿತಿಗಳು ಕವಿಗಳು ಶಿಲ್ಪಿಗಳು ನಮ್ಮ ನಾಡನ್ನು ಬೆಳಗಿದರು. ಇಂತಹ ನಾಡಿನಲ್ಲಿ ಜನಿಸಿದ ಪಂಪ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಶ್ವತವಾಗಿ ಬೆಳಗುವ ಧ್ರುವತಾರೆ.

ಈ ನಾಡು ಸಿರಿ ಸಂಭ್ರಮದಿಂದ ಕೂಡಿದ ಚೆನ್ನದನಾಡು, ಗಂಧದ ಬೀಡು ಸೌಂದರ್ಯದ ನೆಲೆವೀಡು ಎಂದು ಕೇಳಿದ್ದೇವೆ. ನಾಡಿನ ಸಹಜ ಚೆಲುವಿನ ಚಿತ್ರಣವನ್ನು ಪಂಪ ವಿವರಿಸುತ್ತಾ ಕುರುಜಾಂಗಣದ ವರ್ಣನೆ ಜೊತೆ ಜೊತೆಗೆ ಹೇಗೆ ತೆಂಕನಾಡನ್ನು ವರ್ಣಿಸಿದ್ದಾನೋ ಅದೇ ರೀತಿಯಲ್ಲಿ ವಿವರಿಸಿದ್ದಾನೆ. ಅವನಿಗಿದ್ದ ಪರಿಸರ ಪ್ರೇಮ ಅಗಣ್ಯವಾದುದು.

।ವ॥ ಅಂದೆಂತೆನೆ–ಸ (ಮುನ್ಮಿಷ) ದ್ವಿವಿಧ ರತ್ನಮಾಲಾ ಪ್ರಭಾಭೀ(ಲಾ) ರುಣಜಲಪ್ಪ(ವಾ) ವಿಳೋಳವೀಚಿರಯ ಪ್ರದಾರಿತ ಕುಳಾಚಲೋದಧಿ ಪರೀತಮಾಗಿರ್ದ ಜಂಬೂದ್ವೀಪದೊಳಗುಂಟು ನಾಡು ಕುರುಜಾಂಗಣ ನಾಮದಿಂ ಅಂತಾ ಕುರುಜಾಂ ಗಣ ವಿಷಯದೊಳ್– {ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ _ಪ್ರಥಮಾಶ್ವಾಸಂ ವಚನ_51} ವಿವಿಧ ರತ್ನರಾಶಿಯಿಂದ ವರ್ಣವರ್ಣವಾಗಿ ಎದ್ದು ಬಂದು ಕುಲಪರ್ವತಗಳಿಗೆ ಅಪ್ಪಳಿಸುತ್ತಿರುವ ಅಲೆಗಳಿರುವ ಸಮುದ್ರ ಸುತ್ತುವರಿದ ಜಂಭೂದ್ವೀಪದಲ್ಲಿ ಕುರುಜಾಂಗಣ ಎಂಬುದೊಂದು ನಾಡುಂಟು.

> ಜಲಜಲನೊ(ಳ್ಕು)ತಿರ್ಪ ಪರಿಕಾಲ್ ಪರಿಕಲೊಳಳುರ್ಕೆಗೊಂಡ ನೈ।
> ದಿಲ ಪೂಸವೊ ಪೊದಳ್ದ ಪೊಸ ನೈದಿಲ ಕಂಪನೆ ಬೀರಿ ಕಾಯ್ತ ಕೆಂ॥
> ಗೊಲೆಯೊಳೆ ಜೋಲ್ವ ಶಾಳಿ (ನವ)ಶಾಳಿಗೆ ಪಾಯ್ವ ಶುಕಾಳಿ ತೋರೆ ಕೆ।
> ಯ್ವೊಲಗಳಿನೊಪ್ಪಿತೋ(ರಿ)ಸಿರಿ ನೋಡುಗುಮಾ ವಿಷಯಾಂತರದೊಳ್॥
> {ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ _ಪ್ರಥಮಾಶ್ವಾಸಂ ವಚನ_52}

ಜಲಜಲನೆ ಹರಿಯುವ ನೀರುಗಾಲುವೆ, ಕಾಲುವೆಯ (ಉದ್ದಕ್ಕೂ) ತುಂಬಿ ಬೆಳೆದ ಹೊಚ್ಚ ಹೊಸ ನೆಯ್ದಿಲ ಹೂವು ನೆಯ್ದಿಲ ಪರಿಮಳವನ್ನು ಬೀರುತ್ತ ಕೆಂಚಗಿರುವ ಭತ್ತದ ಜೋಲುತ್ತಿರುವ ತೆನೆ, ಆ ತೆನೆಗೆ ಮುತ್ತುವ ಗಿಳಿಯ ಹಿಂಡು ಕಂಗೊಳಿಸುವ ಗದ್ದೆಗಳಿಂದ ಒಪ್ಪವಾಗಿರಲು–ಆ ಕುರುಜಾಂಗಣ

ನಾಡಿನೆಲ್ಲೆಡೆಯಲ್ಲೂ ಲಕ್ಷ್ಮೀಕಟಾಕ್ಷ ಬಿದ್ದಂತಿದೆ. ನೀರಿನ ಕಾಲುವೆಗಳು, ನೆಯ್ದಿಲೆಯ ಹೂವುಗಳು ಅವುಗಳ ಪರಿಮಳ ಭತ್ತದ ತೆನೆ ಗಿಳಿಗಳ ಹಿಂಡು ಕುರುಜಾಂಗಣ ನಾಡಿನ ಸೌಂದರ್ಯಕ್ಕೆ ಇಂಬು ನೀಡಿದಂತೆ ಗೋಚರಿಸುತ್ತದೆ.

ಬೆಳೆದೆರಗಿರ್ದ ಕೆಯ್ವೊಲೆನೆ ಕಯ್ವೊಲನಂ ಬಳಸಿರ್ದ ಪೂತ ಪೂ।
ಗೊಳಗಳೆ ಪೂತ ಪೂಗೊಳಗಳಂ ಬಳಸಿರ್ದ ವಿಚಿತ್ರ ನಂದನಾ॥
ವಳಿಗಳೆ ನಂದನಾವಳಿಗಳಂ ಬಳಸಿರ್ದ ಮದಾಳಿ ಸಂಕುಲಂ।
ಗಳೆ ವಿಷಯಾಂಗನಾ ಲುಳಿತ ಕುಂತಳದಂತೆವೊಲೊಪ್ಪಿ ತೋರುಗುಂ॥
{ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ _ಪ್ರಥಮಾಶ್ವಾಸಂ ವಚನ_53}

ಹೀಗೆ (ಆ ನಾಡಿನೆಲ್ಲೆಡೆ) ಬೆಳೆದು ಬಾಗಿದ ಗದ್ದೆಯೇ, ಗದ್ದೆಗಳ ಸುತ್ತಲೂ ಹೂಬಿಟ್ಟ ಕೊಳಗಳೇ, ಆ ಹೂಗೊಳಗಳ ಸುತ್ತಲೂ ನಂದನ ವನಗಳೇ, ಆ ನಂದನವನಗಳ ಸುತ್ತಲೂ ಮದಿಸಿ ಝೇಂಕರಿಸುವ ದುಂಬಿಯ ಹಿಂಡುಗಳೇ– ಆ ದುಂಬಿಯ ಹಿಂಡಾದರೋ ಆ ನಾಡದೇವಿಯ ಕೊಂಕಿದ ಮುಂಗುರುಳಂತೆ ಒಪ್ಪಿತೋರುವುದು.

ಲಳಿತ ವಿಚಿತ್ರ ಪತ್ರ ಫಲ ಪುಷ್ಪಯುತಾಟವಿ ಸೊರ್ಕಿದಾನೆಯಂ ।
ಬೆಳೆವುದು [ದೇ]ವ ಮಾತೃಕಮೆನಿಪ್ಪ ಪೊಲಂ ನವ ಗಂಧ ಶಾಳಿಯಂ ॥
ಬೆಳೆವುದು ರಮ್ಯ ನಂದನವನಾಳಿ ವಿಯೋಗಿ ಜನಕ್ಕೆ ಬೇಟಮಂ ।
ಬಳೆವುದು ನಾಡ ಕಾಡ ಬೆಳಸಿಂಬೆಳಸಾ ವಿಷಯಾಂತರಾಳದೊಳ್ ॥
{ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ _ಪ್ರಥಮಾಶ್ವಾಸಂ ವಚನ_54}

ಚಿತ್ರ ವಿಚಿತ್ರವಾದ ಎಲೆ ಹೂವು ಹಣ್ಣು ತುಂಬಿದ ಅಲ್ಲಿಯ ಅಡವಿ ಸೊಕ್ಕಿದಾನೆಯನ್ನು ಬೆಳೆಯುವುದು, ದೇವಮಾತೃಕವಾದ ಹೊಲ"ನವಗಂಧಶಾಳಿ" ಎಂಬ (ತಳಿಯ) ಭತ್ತವನ್ನು ಬೆಳೆಯುವುದು, ಆ ರಮ್ಯ ನಂದನ ವನಗಳಲ್ಲಿ ವಿಯೋಗಿ ಜನಕ್ಕೆ ಶೃಂಗಾರವನ್ನು ಬೆಳೆಯುವುದು–ಆ ನಾಡಿನಲ್ಲಾಗಲಿ, ಅದರ ಕಾಡಿನಲ್ಲಾಗಲಿ ಬೆಳೆಯುವೆಲ್ಲಾ ಬೆಳಸೂ ಇನಿದಾದ ಬೆಳಸು. ಪಂಪನ ಕಾಲದ ಪ್ರಕೃತಿ ಸಂಪತ್ತು ಹೇಗಿತ್ತೆಂಬುದನ್ನು ತಿಳಿಸುತ್ತದೆ.

ಜಿನಸೇನರು 'ಪೂರ್ವಪುರಾಣ' ಕೃತಿಯಲ್ಲಿ ಪೋದನಪುರವನ್ನು ಹೀಗೆ ವರ್ಣಿಸಿದ್ದಾನೆ.

"[1]ಉಪಶಲ್ಯಭುವಃ ಕುಲ್ಯಾಪ್ರಣಾಲೀ ಪ್ರಸ್ಯತೋದಕಾಃ
ಶಾಲೀಕ್ಷುಜೀರಕ ಕ್ಷೇತ್ರೈವೃಕಸ್ತಸ್ಯ ಮನೋಹರಮ್"

(ಭತ್ತದ ಗದ್ದೆಗಳು, ಕಬ್ಬಿನ ಗದ್ದೆಗಳು, ಜೀರಗೆಯ ಹೊಲಗಳು ಮುಂತಾಗಿ ಸತತ ಹರಿಯುವ ಕಾಲುವೆಗಳಿಂದ ಸುತ್ತುವರೆದು ಅದು(ಪೋದನಪುರ) ಮನೋಹರವಾಗಿತ್ತು). ಇತ್ಯಾದಿ ಗೋದಾವರಿ ತೀರದ ಬೋದನ ಪ್ರದೇಶವನ್ನು ನೋಡಿದವರಿಗೆ ಇದರಲ್ಲಿ ಉತ್ಪ್ರೇಕ್ಷೆ ಏನು ಕಾಣುವುದಿಲ್ಲ. ಈ ಪೋದನಪುರವೇ ಕನ್ನಡದ ಮಹಾಕವಿ ಪಂಪನು ಇದ್ದ ಆ ಅರಿಕೇಸರಿಯ ರಾಜಧಾನಿ ಬೋದನ. ಪಂಪನು ಈ ಬೋದನವನ್ನು(ಬಹುಧಾನ್ಯ ನಗರ=ಏಕಚಕ್ರನಗರ) ಕುರುಜಾಂಗಣ ನಾಡನ್ನು (ಅರಿಕೇಸರಿಯ ರಾಜ್ಯವನ್ನು) ಬನವಾಸಿ ದೇಶವನ್ನು ಬಹು ಸುಂದರವಾಗಿ ವರ್ಣಿಸಿದ್ದಾನೆ."

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತಜಾತಿ ಸಂ।
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ॥
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೊಳ್ಪೊಡಾವ ಬೆ।
ಟ್ಟುಗಳೊಳಮಾವ ನಂದನವನಂಗಳೊಳಂಬನವಾಸಿ ದೇಶದೋಳ್॥
{ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ _ಚತುರ್ಥಾಶ್ವಾಸಂ ಪದ್ಯ_28}

[2]ಪಂಪನ ಈ ವರ್ಣನೆ ಗಣನೆಗೆ ನಿಲುಕದ್ದು, ಬನವಾಸಿಯ ಕದಂಬರು ಕನ್ನಡದ ಕರ್ನಾಟಕದ ಮೊದಲ ರಾಜವಂಶ, ಇವರ ರಾಜಧಾನಿ ಬನವಾಸಿ, ಬನವಾಸಿಯನ್ನು ದೇಶ ಎಂದು ಪಂಪ ವರ್ಣಿಸಿರುವುದು ಮನನೀಯವಾದುದು. ಬನವಾಸಿಯ ವರ್ಣನೆ ಅನೇಕ ಶಾಸನಗಳಲ್ಲಿ ಕಾವ್ಯಗಳಲ್ಲಿ ಬಂದಿದೆ, ಮೇಲಿನ ಪದ್ಯದ ವರ್ಣನೆ ಹೀಗಿದೆ. ತಳಿರು ತುಂಬಿ ನಿಂತ ಸೊಗಸಾಗಿ ಹೂ ಕಾಯಿ ಮಿಡಿ ಹೊತ್ತ ಮಾವಿನಮರ, ಸಂಭ್ರಮದಿಂದ ಹೂ ತುಂಬಿ ನಿಂತ ಮಲ್ಲಿಗೆ–ಸಂಪಿಗೆ, ಪಂಚಮ ಸ್ವರದಲ್ಲಿ ತಾರಾಸ್ಥಾಯಿ ಮುಟ್ಟುವ ಕುಹೂ ಕುಹೂ ಎಂದು ಎಂದು ಕೂಗುವ ಕೋಗಿಲೆ, ಹೂ ಹೂಗಳ ಮೇಲೆ ಜಿನುಗುಡುವ ಝೇಂಕಾರದ ದುಂಬಿ ಹಿಂಡು; ವನದಲ್ಲಿ ವೈಯಾರದಿಂದ ನಲಿದೊಲಿದು ಕೂಡುವ ಪ್ರೇಮಿಗಳು– ಎಲ್ಲಿ ನೋಡಿದರೂ, ಯಾವ ಬೆಟ್ಟದ ಸಾಲಿನಲ್ಲಿ ಹೆಜ್ಜೆಹಿಟ್ಟರು –ಆ ಮೈ ನವಿರೇಳಿಸುವ ದೃಶ್ಯಗಳೇ ಬನವಾಸಿ ದೇಶದ ಈ ವರ್ಣನೆ ಸುಂದರ ವಸುಂಧರೆಯಾದ ನಮ್ಮ ನಾಡಿನ ಮಹತ್ವವನ್ನು ತುಂಬಾ ಹೃದಯಂಗಮವಾಗಿ ಪಂಪ ಮನೋಹರವಾಗಿ ಚಿತ್ರಿಸಿದ್ದಾನೆ.

[3]ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ।
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ॥
ನಾಗಿಯುಮೇನೊ ತೀರ್ದಪು(ದೆ)ತೀರದೊಡಂ ಮರಿದುಂಬಿಯಾಗಿ ಮೇಣ್।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್॥
{ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ _ಚತುರ್ಥಾಶ್ವಾಸಂ ಪದ್ಯ_29}

ತ್ಯಾಗದ–ಭೋಗದ–ಅಕ್ಷರದ–ಗಾನದ ಗೋಷ್ಠಿಗಳ ಅಕ್ಕರೆಯ ಸವಿಗೆ ನೆಲೆಯಾದ ಮನಸುಳ್ಳವರೇ ಮನುಷ್ಯರು, ಅಂಥವರಾಗಿ ಹುಟ್ಟಲು ಏನಾದರಾಗಲಿ ಸಾಧ್ಯವೋ? ಸಾಧ್ಯವಾಗದಿದ್ದರೂ– ಮರಿದುಂಬಿಯಾಗಿ ಅಥವಾ ಕೋಗಿಲೆಯಾಗಿ ಹುಟ್ಟಬೇಕು ನಂದನವನದಲ್ಲಿ ಬನವಾಸಿ ದೇಶದೊಳಗೆ ಎಂಬ ಪಂಪನ ಮಾತು ಎಷ್ಟು ಪ್ರಸ್ತುತವೆನಿಸುತ್ತದೆ. ಈ ಪದ್ಯದಲ್ಲಿ ವರ್ಣನೆ, ವಿವರಣೆ, ಕಲ್ಪನೆ ಮನಮುಟ್ಟುವಂತೆ ಚೈತನ್ಯದಾಯಕವಾಗಿ

ವಿಜೃಂಭಿಸಿವೆ. ನಾಡಿನ ಪ್ರಕೃತಿಯ ಚೆಲುವು ಕನ್ನಡಿಗರ ರಸಿಕತೆ, ತ್ಯಾಗ–ಭೋಗ ಸಮನ್ವಯ ಸ್ವಭಾವ, ಸಂಗೀತ ಗೋಷ್ಠಿಗಳಲ್ಲಿ ರಸಿಕರು. ಮುಂದಿನ ಜನ್ಮದಲ್ಲಿ ಮನುಷ್ಯನಾಗಿ ಹುಟ್ಟದಿದ್ದರೂ ಮರಿದುಂಬಿಯಾಗಿ ಅಥವಾ ಕೋಗಿಲೆಯಾಗಿ ಬನವಾಸಿ ದೇಶದ ನಂದನದಲ್ಲಿ ಜನಿಸಬೇಕು ಎಂಬ ಮನದಿಂಗಿತ ಪಂಪನ ನಾಡ ಪ್ರೇಮ ಹೃದಯಂಗಮವಾಗಿ, ಚಿತ್ತಾಕರ್ಷಕವಾಗಿ ಮೂಡಿ ಬಂದಿದೆ. ಆತನ ನಾಡ ಪ್ರೇಮ ಸಹಜತೆಯಿಂದ ಕೂಡಿದೆ.

> [4]ತೆಂಕಣ ಗಾಳಿ ಸೋಂಕಿದೊಡಮಳ್ಳುಡಿಗೇಳ್ದೊಡಮಿಂಪನಾಳ್ದಗೇ।
> ಯಂ ಕಿವಿವೊಕ್ಕಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ॥
> ಪಂ ಗೆಡೆಗೊಂಡೊಡಂ ಮಧು ಮಹೋತ್ಸವ ಮಾದೊಡಮೇನನೆಂಬೆನಾ।
> ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ॥
> {ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ –ಚತುರ್ಥಾಶ್ವಾಸಂ ಪದ್ಯ–30}

ಸಂಸ್ಕೃತದ ಕಾಳಿದಾಸನಿಗೆ ಹೋಲಿಸುವ ಕನ್ನಡದ ಕವಿ ಯಾರಾದರೂ ಇದ್ದರೆ ಅವನೆ ಪಂಪ. ಅವನ ಅಪೂರ್ವವಾದ ಭವ್ಯವಾದ ವರ್ಣನೆ, ಮನಮೋಹಕವಾದ ಪ್ರಕೃತಿ ಸಂಪತ್ತು ಎಲ್ಲವನ್ನು ಈ ಪದ್ಯದಲ್ಲಿ ಸೆರೆ ಹಿಡಿದಿದ್ದಾನೆ. ದಕ್ಷಿಣದ ಮಲಯ ಮಾರುತವು ತನ್ನ ಮೈಗೆ ಸುಳಿದರೂ, ಉತ್ತಮವಾದ ಸ್ತೋತ್ರ ಮಿಶ್ರಿತವಾ ಸುಭಾಷಿತಗಳನ್ನು ಶ್ರವಣ ಮಾಡಿದರೂ, ಇಂಪಾದ ಗಾಯನವು ಕಿವಿಗೆ ಬಿದ್ದರೂ, ಅದೇ ಆಗ ಅರಳಿದ ಮಲ್ಲಿಗೆಯ ಮೊಗ್ಗೆಗಳನ್ನು ಕಂಡರೂ, ಕಾಂತಾಸಮಾಗಮದ ಸಂತೋಷವುಂಟಾದರೂ, ವಸಂತೋತ್ಸವವನ್ನು ಅನುಭವಿಸಿದರೂ (ಮುಖ್ಯವಾಗಿ) ಎಂಥ ಸುಖಗಳನ್ನು ಅನುಭವಿಸಿದ್ದಾಗ್ಯೂ, ಯಾರು ಎಷ್ಟೇ ಪ್ರತಿಬಂಧ ಮಾಡಿದರೂ ನನ್ನ ಮನಸ್ಸು ಆ ಬನವಾಸಿ ದೇಶವನ್ನು ಸ್ಮರಿಸದೇ ನಿಲ್ಲದು. (ಕರ್ನಾಟಕ ಗತವೈಭವ ಆಲೂರ ವೆಂಕಟರಾಯ) ಪಂಪನಿಗೆ ಕನ್ನಡನಾಡಿನ ಬಗ್ಗೆ ಬಲು ಪ್ರೀತಿ. ಉತ್ತಮ ಸಂಸ್ಕೃತಿ ಹೊಂದಿದ್ದ ಆತನಿಗೆ ಕರ್ನಾಟಕದ ಬನವಾಸಿ ದೇಶದ ಬಗ್ಗೆ ವಿಶೇಷ ಒಲವುಳ್ಳ ನಾಡಿನ ಹಿರಿತನದ ಬಗ್ಗೆ ಆಸಕ್ತಿ, ಕಳಕಳಿ ಪೂಜ್ಯತಾ ಮನೋಭಾವ ಸರ್ವಾದರಣೀಯವಾದುದು.

> ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ।
> ಯ ಮುಮಾದಕ್ಕರ ಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್ ಕೊಳ್ವ ಜೊ॥
> ಪಮುಮೇಳ್ವುದನುಳ್ಳ ಮೆಯ್ಸಕಮುಮಿಂತೆನ್ನಂ ಕರಂನೋಡಿನಾ।
> ಡೆ ಮನಂಗೊಂಡಿರೆ ತೆಂಕನಾಡ ಮರೆಯಲ್ಕಿನ್ನೇಂ ಮನಂ ಬರ್ಕುಮೇ॥
> {ಪಂಪಭಾರತಂ ಎಂಬ ವಿಕ್ರಮಾರ್ಜುನವಿಜಯಂ –ಚತುರ್ಥಾಶ್ವಾಸಂ ಪದ್ಯ–31}

ಅಮೃತವನ್ನು ಮುಕ್ಕಳಿಸುವಂತಹ ರತಿಸುಖದ ಒಂದಿಂಪು, (ದೂರದಿಂದ) ಕೇಳಿಸಿದೊಂದು ಗಾನ, ನಡೆದೊಂದು ವಿದ್ವದ್ಗೋಷ್ಠಿ, ಜಾಣರದೊಂದು ಒಳ್ಳೆಯ ಮಾತು, ತಣ್ಣಗೆ ಹಿತಕರವಾದೊಂದು ಹೂಗೊಂಚಲು, ಬೇಕಾದ್ದೆಲ್ಲವನ್ನೂ ದೊರಕಿಸುವ ಯೋಗಕ್ಷೇಮ, ಇಂತು ಈ ಒಂದೊಂದು ಮನವನ್ನು ಸಂಪೂರ್ಣವಾಗಿ ಸೂರೆಗೊಂಡಿರಲು(ಈ) ತೆಂಕ (ದಕ್ಷಿಣದ) ನಾಡನ್ನು ಮರೆಯಲಿನ್ನು ಮನಬರುವುದೇ. ಪರಿಸರದ ಬಗ್ಗೆ ಈ ನಾಡಿನ ಮಹತ್ವದ ಬಗ್ಗೆ ಅವನ ಪ್ರತಿಭೆ ಅವಿಸ್ಮರಣೀಯವಾದುದು.

ಜಗತ್ತಿನ ವಿಕಾಸ ಮತ್ತು ಬೆಳವಣಿಗೆಗೆ ಪರಿಸರ ಬಹಳ ಮುಖ್ಯವಾದುದು. ಅಭಿವೃದ್ಧಿಯ ವಿಕಾಸಕ್ಕೆ ಬೆಳವಣಿಗೆಗೆ ಪರಿಸರ ಬಹಳ ಮುಖ್ಯ. ಪರಿಸರದೊಡನೆ ಮನುಷ್ಯನ ಸಂಬಂಧ ಅವಿನಾಭಾವವಾದುದು. ಪರಿಸರದ ಸೌಂದರ್ಯ, ಸಂಭ್ರಮ, ನಿಸರ್ಗದ ಅತಿರಮ್ಯತೆ, ಅಲೌಕಿಕವಾದ ಅವರ್ಣನೀಯವಾದ ಸೌಂದರ್ಯಾನುಭವದೆಡೆಗೆ ಸಹೃದಯನನ್ನು ಸೆಳೆಯುವುದರ ಜೊತೆಗೆ ನಿಸರ್ಗದ ವಿಚಾರಗಳನ್ನು ಸೃಷ್ಟಿಯ ಚೆಲುವಿನೊಡನೆ ಚೇತೋಹಾರಿಯಾಗಿ ಪಂಪ ಚಿತ್ರಿಸಿದ್ದಾನೆ. ಪ್ರಕೃತಿ ಬಗ್ಗೆ, ನಾಡಿನ ಬಗ್ಗೆ ಪಂಪನ ಕಾಳಜಿ ಆ ಕಾಲಕ್ಕೆ ಸಿಮಿತವಾದುದಲ್ಲ. ಪ್ರಸ್ತುತ ಪರಿಸರವನ್ನು ನಾವು ನೋಡಲು ಸಾಧ್ಯವೇ? ಎಂಬ ಪ್ರಶ್ನೆ ನಮ್ಮನ್ನು ಕಾಡದೆ ಇರಲಾರದು. ಪಂಪನ ಕಾಲದಲ್ಲೂ ಪರಿಸರದ ಉಳಿವಿಗಾಗಿ ಮತ್ತು ಅದರೊಡನೆ ಸಂಬಂಧವಿರಿಸಿಕೊಂಡಂತೆ ಭಾಸವಾಗುತ್ತದೆ. ಪ್ರಕೃತಿಯ ಅಸಮತೋಲನದ ವಿರುದ್ಧ ಕೆಲವೂ ಪದ್ಯಗಳನ್ನು ಚಿತ್ರಿಸಿರುವಂತೆ, ಸಮತೋಲನಕ್ಕೆ ತನ್ನ ನಾಡಿನ ಜನರ ದೃಷ್ಟಿಕೋನ ಬದಲಾಗಬೇಕೆಂಬುದು ಪಂಪನ ಅಭಿಪ್ರಾಯ ಇರಬಹುದು. ನಿಸರ್ಗವನ್ನು ಪೂಜಿಸಬೇಕು, ಗೌರವಿಸಬೇಕು ಅದರೊಡನೆ ಬೆರೆತು ಮನಸು ಮುದಗೊಂಡು ಅರಳಬೇಕು, ಮನಸು ಕೆರಳಬಾರದು ಪರಿಸರದ ಮೇಲೆ ನಿರಂತರವಾಗಿ ಮನುಷ್ಯನ ಕ್ರೌರ್ಯ ಅವಿರತವಾಗಿ ನಡೆಯುತ್ತಲೇ ಇದೆ. ಮಾನವ ನಿಸರ್ಗ ಪ್ರೀತಿಯಿಂದ ದೂರವಾಗಿ ಅದರ ಅವನತಿಗೆ ಕಾರಣಭೂತನಾಗಿರುವುದು ಕ್ಷಮಿಸಲಾಗದಷ್ಟೂ ಬೆಳೆದಿದ್ದಾನೆ. ಪಂಚಭೂತಗಳಲ್ಲಿ ಮುಖ್ಯವಾದ ಭೂಮಿ, ನೀರು ಮತ್ತು ಗಾಳಿ ಎಷ್ಟು ಕಲುಷಿತವಾಗಿವೆ. ಗಣಿಗಾರಿಕೆ ಅಭಿವೃದ್ಧಿ ಹೆಸರಲ್ಲಿ ಭೂಮಿಯ ಹಿರಿಮೆ ಗರಿಮೆಗಳು ಕಳೆಗುಂದುತ್ತಿವೆ. ನೀರು ಜೀವ ಜಲ ನೀರಿಲ್ಲದಿದ್ದರೇ ಯಾವ ಜೀವಿಯೂ ಬದುಕಲು ಸಾಧ್ಯವಿಲ್ಲ, ಇದು ಮನುಷ್ಯನಿಗೆ ತಿಳಿದಿರುವ ವಿಚಾರ. ಕೆರೆ, ಹಳ್ಳ, ತೊರೆ, ಕಟ್ಟೆ, ಬಾವಿ ವಿನಾಶದ ಕಡೆಗೆ ಮುಖ ಮಾಡಿವೆ. ಇರುವ ಕೆರೆ, ಹಳ್ಳ, ತೊರೆ, ಕಟ್ಟೆ, ಬಾವಿಗಳು ಕಲುಷಿತಗೊಂಡಿವೆ. ಪರಿಶುದ್ಧವಾದ ಗಾಳಿ ಉತ್ತಮ ಆರೋಗ್ಯಕ್ಕೆ ಮೂಲ ಕಾರಣ. ಮನುಷ್ಯ ಮರ ಗಿಡಗಳನ್ನು ನಾಶ ಮಾಡಿ, ಜೀವಜಂತುಗಳು ಕಾಡುಪ್ರಾಣಿಗಳು ನಾಡಿನೆಡೆಗೆ ನುಗ್ಗುತ್ತಿವೆ. ಇವೆಲ್ಲದಕ್ಕೂ ಕಾರಣ ಪ್ರಕೃತಿಯ ಅಸಮತೋಲನ. ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಿ ಆನಂದಿಸಬೇಕಾದ ಮಾನವನ ದುರಾಸೆಗೆ ಕೊನೆ ಇಲ್ಲ. ದುರಾಸೆಗೆ ತಕ್ಕ ಪ್ರತಿಫಲ ಅನುಭವಿಸಬೇಕಾಗುತ್ತದೆ. ನಿಸರ್ಗದಲ್ಲಿರುವ ಪ್ರತಿಯೊಂದು ಜೀವಿಯೂ ಮಾನವನ ಬದುಕಿಗೆ ಪೂರಕವೇ ಆದರೆ, ಪ್ರೀತಿಯಿಂದ ಪ್ರಕೃತಿಯೊಡನೆ ಬದುಕನ್ನು ಕಟ್ಟಿಕೊಳ್ಳದಿದ್ದರೆ ವಿನಾಶ ಕಟ್ಟಿಟ್ಟ ಬುತ್ತಿ. ನಿಸರ್ಗದ ಸಹಜ ಸೌಂದರ್ಯವನ್ನು ರಮಣೀಯತೆಯನ್ನು ಪಂಪ ತನ್ನ ಕಾವ್ಯದಲ್ಲಿ ವರ್ಣಿಸುವುದರ ಜೊತೆಗೆ ಪ್ರಕೃತಿ ಸಮತೋಲನ ಕಾಪಾಡಿಕೊಳ್ಳದಿದ್ದರೆ ಮನುಷ್ಯನ ಉಳಿವು ಅಸಾಧ್ಯ ಎಂಬ ಎಚ್ಚರಿಕೆಯೂ ಇದೆ ಎಂಬುದನ್ನು ಅರಿಯಬೇಕು. ಪರಿಸರ ಸಮತೋಲನವಿದ್ದಾಗ ಮನುಷ್ಯನ ಉಳಿವಿಗೆ ಸಹಕಾರಿಯಾಗಿರುತ್ತದೆ. ಆ ಹಿನ್ನಲೆಯಲ್ಲಿ ಪಂಪನ ಪರಿಸರ ಪ್ರೇಮ ವಿಶೇಷವಾದುದು. ಕನ್ನಡ ಸಾಹಿತ್ಯದಲ್ಲಿ ಪಂಪ ರತ್ನತ್ರಯರಲ್ಲಿ ಒಬ್ಬನಾಗಿ ಪ್ರಕೃತಿಯ ಚಿತ್ರಣ,ನಾಡಿನ ಸೌಂದರ್ಯಗಳ ವರ್ಣನೆ ಪರಿಸರದ ಮಹತ್ವವನ್ನು

ಮನನೀಯವಾಗಿ ಚಿತ್ರಿಸಿದ್ದಾನೆ.

**ಅಡಿ ಟಿಪ್ಪಣಿಗಳು**

1. ಕವಿಗಳು ಕಂಡ ಕರ್ನಾಟಕ –ಸೀತಾರಾಮ ಜಾಗಿರ್ ದಾರ್ (ಕನ್ನಡ ಪರಂಪರೆ–ಪುಟ 16–17)
2. ಕವಿಗಳು ಕಂಡ ಕರ್ನಾಟಕ –ಸೀತಾರಾಮ ಜಾಗಿರ್ ದಾರ್ (ಕನ್ನಡ ಪರಂಪರೆ–ಪುಟ 18)
3. ಪಂಪನ ಸಮಸ್ತ ಭಾರತ ಕಥಾಮೃತ ಡಾ:ಎಲ್.ಬಸವರಾಜು–ಪುಟ 18–19 83
4. ಕರ್ನಾಟಕ ಗತವೈಭವ –ಆಲೂರ ವೆಂಕಟರಾಯರು ವೈಭವ ವರ್ಣನೆ–ಪುಟ 72.